
ಕೋಪಗೊಂಡ ನಾನು ಅವಳ ಕೈಯ್ಯನ್ನು ಅತ್ತ ಸರಿಸಿ, 'ನಾನು ಅಂತೋನಲ್ಲಾ... ಊಟ ಬೇಕಾದ್ರೆ ಕೊಡುಸ್ತೀನಿ...' ಅಂದೆ. ಅವಳ ಮುಖ ಸಂತಸದಿಂದ ಅರಳಿತು.

'ಎಷ್ಟೊಂದು ಒಳ್ಳೇನು ನೀನು... ಬೇಜಾರು ಮಾಡ್ಕೋಬೇಡಾ ರಾಜಾ... ಇಷ್ಟೊತ್ತಿನಲ್ಲಿ ಕುಡಿದುಬಿಟ್ಟಿರ್ತೀಯಾ... ಬಂದೇ ಬರ್ತೀಯಾ ಅಂತ ಕೇಳ್ದೆ... ನಡೀ... ನಡೀ... ಊಟ ಕೊಡ್ಸು...' ಎಂದವಳು ವ್ಯಾನಿಟಿ ಬ್ಯಾಗನ್ನು ಬಗಲಿಗೆ ನೇತು ಹಾಕಿಕೊಂಡು ಯಾವುದೇ ಸಂಕೋಚವಿಲ್ಲದೆ ದಡಕ್ಕನೆ ಬೈಕು ಹತ್ತಿ ಕುಳಿತು ಒಂದು ಕೈಯಿಂದ ನನ್ನ ಭುಜ ಹಿಡಿದು ನನಗೆ ಒತ್ತಿ ಕುಳಿತಳು. ನನ್ನ ಮೈಮೇಲೆ ಹಾವು ಹರಿದಾಡಿದಂತಾಗಿ ಕುಳಿತಲ್ಲೇ ಕೊಸರಾಡಿ, 'ಸರಿಯಾಗಿ ಕೂತ್ಕೋ...' ಎಂದು ರೇಗಿದೆ.

'ಆಯ್ತು... ಆಯ್ತು... ನಡಿ ರಾಜಾ...' ಎಂದು ಅವಸರಿಸಿ ಭುಜದ ಮೇಲಿದ್ದ ಕೈ ತೆಗೆದು ಹಿಂದಕ್ಕೆ ಸರಿದು ಕುಳಿತಳು. ನಾನು ಬೈಕನ್ನು ನಿಧಾನವಾಗಿ ಮುನ್ನಡೆಸಿದೆ. ಇಷ್ಟೊತ್ತಿನಲ್ಲಿ ಕುಡಿದುಬಿಟ್ಟಿರ್ತೀಯಾ ಎಂಬ ಅವಳ ಮಾತು ಮನಸ್ಸಿನಲ್ಲಿ ಮರುಕಳಿಸಿ ಇವಳಿಗೆ ಸಿಗುವ ಗಿರಾಕಿಗಳೆಲ್ಲಾ ಕುಡಿತದ ನಶೆಯಲ್ಲಿರುವವರೇ ಇರಬೇಕು, ಇನ್ಯಾರು ತಾನೇ ಇವಳ ಬಳಿ ಬಂದಾರು ಎನಿಸಿ ಅವಳ ಬಗ್ಗೆ ಕನಿಕರ ಮೂಡಿತು. ಅವಳು ತೋರಿಸಿದ ಕಾಂಡೋಮಿನ ಪ್ಯಾಕೆಟಿನ ನೆನಪಾಗಿ ಸದ್ಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ಪ್ರಜ್ಞೆಯಾದರೂ ಇದೆಯೆಲ್ಲಾ ಎಂದು ತುಸು ಸಮಾಧಾನವಾಯಿತು. ಗಿರಾಕಿ ಸಿಗಬಹುದೆಂಬ ಭರವಸೆಯಿಂದ ಇದ್ದ ದುಡ್ಡನ್ನು ಮಲ್ಲಿಗೆ ಹೂವು ಮತ್ತು ಕಾಂಡೋಮಿನ ಪ್ಯಾಕೇಟಿಗಾಗಿ ಖರ್ಚು ಮಾಡಿ ಸರಿರಾತ್ರಿಯಾದರೂ ಯಾವ ಗಿರಾಕಿಯೂ ಸಿಗದೇ ಅವಳು ಹತಾಶಳಾಗಿರಬೇಕು. ರಸ್ತೆಯಲ್ಲಿ ಸಿಕ್ಕಿದ ನನ್ನನ್ನು ಪುಸಲಾಯಿಸಿ ಹೊಟ್ಟೆತುಂಬಿಸಿಕೊಳ್ಳಲಾದರೂ ಹಣ ಸಂಪಾದಿಸುವ ಪ್ರಯತ್ನ ಮಾಡಿರಬೇಕು.



ಒಂದರ್ಧ ಕಿಲೋಮೀಟರು ಹೋಗುತ್ತಿದ್ದಂತೆ ರಸ್ತೆಯ ಬದಿಯಲ್ಲಿ ನಿಂತಿದ್ದ ನೈಟ್ ಕ್ಯಾಂಟೀನು ಗಾಡಿಯೊಂದು ಕಾಣಿಸಿತು. ಯಾರೂ ಗಿರಾಕಿಗಳಿದ್ದಂತೆ ಕಾಣಿಸಲಿಲ್ಲ. ಹತ್ತಿರ ಹೋಗಿ ನಿಲ್ಲಿಸಿದೆ. ಅಲ್ಲಿದ್ದ ಗಂಡಹೆಂಡತಿ ವ್ಯಾಪಾರ ಮುಗಿಸಿ ಸಾಮಾನುಗಳನ್ನು ಗಾಡಿಗೆ ತುಂಬುತ್ತಿದ್ದರು.

ಬೈಕಿನ ಹಿಂದೆ ಕುಳಿತಿದ್ದ ಇವಳು ಛಂಗನೆ ನೆಗೆದು, 'ಏನಾದ್ರೂ ತಿನ್ನೋದಿಕ್ಕೆ ಇದೇಯೆನಕ್ಕಾ...' ಎಂದು ಅಲ್ಲಿದ್ದ ಹೆಂಗಸನ್ನು ಕಾತರದಿಂದ ಕೇಳಿದಳು. ಅವಳನ್ನೂ ಮತ್ತು ಬೈಕಿನಿಂದ ಇಳಿಯುತ್ತಿದ್ದ ನನ್ನನ್ನೂ ಒಂದು ರೀತಿಯಾಗಿ ನೋಡಿದ ಆ ಹೆಂಗಸು, 'ಏನೂ ಇಲ್ಲಾ... ಅನ್ನ ಸಾಂಬಾರು ಮಾತ್ರ ಇದೆ...' ಎಂದು ಉದಾಸೀನವಾಗಿ ಉತ್ತರಿಸಿದಳು.

'ಅದೇ ಸಾಕು... ಒಂದು ಪ್ಲೇಟು ಅನ್ನಸಾಂಬಾರು